**ಎಮ್ ವಿ ಸಿ ನಂಃ 1333/2024**
**ಆರ್.ಡಬ್ಲ್ಯೂಃ 1,**

**ಸಾಕ್ಷಿಯನ್ನು ದಿನಾಂಕ : 23-01-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಶ್ರೀ. ಎ.ಎಮ್. ವಾಯ. ಎದುರುದಾರ ಪರ ವಕೀಲರಿಂದ:**

ಸಾಕ್ಷಿದಾರನು ತನ್ನ ಸಾಕ್ಷಿ ಪ್ರಮಾಣ ಪತ್ರ ಹಾಜರುಪಡಿಸಿದ್ದು ಹಾಗೂ ಅದರಲ್ಲಿ ಇರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನಿಜ ಇರುತ್ತವೆ.

ಸಾಕ್ಷಿಯು ಈ ದಿನ ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

ನಿಆರ್. -1- ಪಾಲಸಿ ಕಾಫಿ ನಕಲು

**ಪಾಟಿ ಸವಾಲು: ಶ್ರೀ. ವಿ.ಎಸ್. ಆರ್. ಅರ್ಜಿದಾರ ಪರ ವಕೀಲರಿಂದ :**

ನಾನು ಅಂತಿಮ ವರದಿ ಪ್ರಕಾರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಅಂತಿಮ ವರದಿ ಪ್ರಕಾರ ವಿಮೆ ಹೊಂದಿದ ಕೆ.ಎ.-33-ಎಮ್-4568 ಮೇಲೆ ಅಂತಿಮ ವರದಿ ಸಲ್ಲಿಸಲಾಗಿದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಸುಳ್ಳು ಎಂದು ನುಡಿಯುತ್ತಾರೆ. ಕೆ.ಎ.-33-ಎಮ್-4568 ಅಪಘಾತ ಪಡಿಸಿದ ಈ ವಾಹನ ನಮ್ಮ ವಿಮೆಯ ಷರತ್ತುಗಳನ್ನು ಉಲ್ಲಂಘಿಸಿಲ್ಲಾ ಎಂದರೆ ಸರಿಯಲ್ಲ. ಅಪಘಾತ ಆದ ನಂತರ ಅಪಘಾತ ಪಡಿಸಿದ ವಾಹನ ಮಾಲಿಕ ನಮಗೆ ತಿಳಿಸಿಲ್ಲಾ ಅಂತಾ ಒಂದೇ ಕಾರಣಕ್ಕೆ ನಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ವಾಹನ ಮಾಲಿಕ ನಮ್ಮ ಕಂಪನಿಗೆ ಬೇಕಾದ ಎಲ್ಲಾ ದಾಖಲೆಗಳನ್ನು ಕೊಟ್ಟಿದ್ದರು ಅವುಗಳನ್ನು ಮುಚ್ಚಿಟ್ಟು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಅಂತಿಮ ವರದಿ ಪ್ರಕಾರ ಅರ್ಜಿದಾರರ ವಾಹನಕ್ಕೆ ಕೆ.ಎ.-33-ಎಮ್.4658 ವಾಹನ ಹಿಂದಿನಿಂದ ಬಂದು ಡಿಕ್ಕಿ ಪಡಿಸಿದೆ ಎಂದರೆ ಸರಿಯಲ್ಲ. ಕೆ.ಎ.-33-ಎಮ್.-4658 ವಾಹನ ಅರ್ಜಿದಾರರ ವಾಹನಕ್ಕೆ ಹಿಂದಿನಿಂದ ಬಂದು ಡಕ್ಕಿ ಪಡಿಸಿದ ಕಾರಣ ಆತನ ಬೇಜವಾಬ್ದಾರಿತನದಿಂದ ಅಪಘಾತ ಆಗಿದ್ದು ನಾವು ಪರಿಹಾರ ಕೊಡಲು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲಾ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ಕಾರಿನ ಚಾಲಕ ದಂಡ ಪಾವತಿಸಿದ್ದಾರೋ ಏನು ನಾವು ತಿಳಿದುಕೊಂಡಿಲ್ಲಾ. ಅಪಘಾತ ಪಡಿಸಿದ ಕಾರಿನ ಚಾಲಕ ಕ್ರಿಮಿನಲ್ ಕೇಸದಲ್ಲಿ ತನ್ನ ತಪ್ಪು ಒಪ್ಪಿಕೊಂಡು ದಂಡ ಪಾವತಿಸಿದ್ದಾನೆ ಎಂದರೆ ಗೊತ್ತಿಲ್ಲಾ. ಪರಿಹಾರ ನೀಡಲು ನಾವು ಭಾಧ್ಯಸ್ಥರು ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ**